ಬೆಳಗಾವಿ ಜಿಲ್ಲೆಯ ನಾಗರಗಾಳಿ ಗ್ರಾಮದ ರಾಜೇಂದ್ರ ಚೆನ್ನಿ, ಸದ್ಯಕ್ಕೆ ಶಿವಮೊಗ್ಗದ ನಿವಾಸಿ. ಈ ಇಂಗ್ಲಿಷ್ ಮೇಷ್ಟ್ರು, ಬರವಣಿಗೆ ಹಾಗೂ ಚಳವಳಿ ಎರಡರಲ್ಲೂ ನಿರತರು. ಇಂಗ್ಲಿಷಿನೊಂದಿಗೆ ಕನ್ನಡದಲ್ಲೂ ಬರವಣಿಗೆಯಲ್ಲಿ ನಿರತರು. ವಿಮರ್ಶೆ ಮತ್ತು ವೈಚಾರಿಕ ಬರವಣಿಗೆಯ ಜೊತೆಗೆ ಕಥೆಗಾರರಾಗಿಯೂ ಗುರ್ತಿಸಿಕೊಂಡವರು. 'ಅಮೂರ್ತತೆ ಮತ್ತು ಪರಿಸರ', 'ದೇಶೀವಾದ', 'ಬೇಂದ್ರೆ ಕಾವ್ಯ ಸಂಪ್ರದಾಯ ಮತ್ತು ಸ್ವಂತಿಕೆ', 'ಮಾಸ್ತಿ ಕತೆಗಳು: ಒಂದು ಅಧ್ಯಯನ', 'ದೊಡ್ಡ ಮರ', 'ಕರುಳ ಬಳ್ಳಿಯ ಸೊಲ್ಲು', 'ನಡುಹಗಲಿನಲ್ಲಿ ಕಂದೀಲುಗಳು', 'ಮಳೆಯಲ್ಲಿ ಬಂದಾತ', 'ಟ್ರೆಡಿಷನ್ಸ್ ಆಫ್ ಮಾಡರ್ನಿಟಿ: ಎ ಕಂಪಾರೇಟೀವ್ ಸ್ಟಡೀಸ್ ಆಫ್ ಟಿ.ಎಸ್. ಎಲಿಯೆಟ್ ಆಂಡ್ ಗೋಪಾಲಕೃಷ್ಣ ಅಡಿಗ' ಚೆನ್ನಿ ಅವರ ಕೆಲವು ಕೃತಿಗಳು.

ಅಲ್ಲದೆ ಇವರಿಗೆ ಉದ್ಯೋಗ ಕೊಡಬಾರದೆಂದು ಬ್ರಿಟಿಷ್ ಸರಕಾರದ ನಿರ್ದೇಶನ. ಹೀಗಾಗಿ ನಿರುದ್ಯೋಗಿಯಾಗಿ, ಪರಾವಲಂಬಿಯಾಗಿ ಬದುಕಿದ ಬೇಂದ್ರೆಯವರು ಅವರ ಗೆಳೆಯನ ಮಾತಿನಲ್ಲಿ 'ನೋವಿನ' ಕವಿಯಾದದ್ದು ಆಶ್ಚರ್ಯವಲ್ಲ.

ಇದು ದಾಂಪತ್ಯದಲ್ಲಿ ಒಗರನ್ನೂ ಹುಳಿಯನ್ನೂ ತರುತ್ತದೆ. ಒಂದು ಕಡೆ ಮಕ್ಕಳ ಸಾವು ಹಾಗೂ ಬಡತನದಿಂದಾಗಿ ಸಂಸಾರ ನಿರ್ವಹಿಸುವುದು ಹೆಂಡತಿಗೆ ಅಸಾಧ್ಯವೆನಿಸುತ್ತದೆ. ಆದರೆ, ಈ ಕಾಲವು ಕವಿಯ ಅತ್ಯಂತ ಸೃಜನಶೀಲ ವರ್ಷಗಳೂ ಕೂಡ. 'ಗೆಳೆಯರ ಬಳಗ' ಮತ್ತು ಕನ್ನಡದ ಕೆಲಸಗಳಿಂದಾಗಿ ಕವಿಯ ಬಹಿರ್ಮುಖ ಬದುಕಿಗೆ ತಡೆಯಿಲ್ಲ. ಇದರಿಂದಾಗಿ ಅವಳಿಗೆ ಏಕಾಕಿತನ ತೀವ್ರವಾಗಿ ಬಾಧಿಸತೊಡಗಿ ತಾವಿಬ್ಬರು ತೀರಾ ಭಿನ್ನವೆನ್ನುವ ನಂಬಿಕೆ ಬಂದುಬಿಡುತ್ತದೆ. ಈ ಬಿರುಕನ್ನು ತುಂಬುವುದು ಸಾಧ್ಯವೇ ಇಲ್ಲವೆನಿಸುತ್ತದೆ. ಅವಳು ಮೌನವನ್ನು ಆಶ್ರಯಿಸುತ್ತಾಳೆ. ವಿಶೇಷವೆಂದರೆ, ಈ ಮೌನಪರ್ವವು ಆರಂಭವಾಗುವುದು ಅವನಿಂದ. ಸಾರ್ವಜನಿಕ ವ್ಯಕ್ತಿಯಾಗಿರುವ ಅವನ ನಿರಂತರ ಓಡಾಟದಿಂದಾಗಿ ಅವಳು 'ಮೌನದರಣ್ಯಕೆ ಬೆದರುತ್ತಾಳೆ'. ಮುಂದೆ ಅದೇ ಮೌನವನ್ನು ಅವಳು ತನ್ನ ಪ್ರತಿರೋಧದ ಸಾಧನವನ್ನಾಗಿಸಿಕೊಳ್ಳುತ್ತಾಳೆ. ಅಥವಾ ತನ್ನ ನೋವಿನ ಅಭಿವ್ಯಕ್ತಿಯಾಗಿಸಿಕೊಳ್ಳುತ್ತಾಳೆ.

ನನ್ನ ಪಾಲಿಗೆ ಮಾತ್ರ ಹೇ ಪ್ರೇಮದೇವತೆ!
ಮೌನಮುದ್ರೆಯನಲ್ಲು ನೀ ತೊಟ್ಟಿದ್ದೆ

ಇದರಿಂದ ತಬ್ಬಿಬ್ಬಾಗಿ ದುರ್ಭೇದ್ಯವೆನಿಸುವ ಮೌನ–ದುರ್ಗಕ್ಕೆ ಮಾರ್ಗ ತೋರದು ಎನ್ನುತ್ತಾರೆ. ಅವರಿಗೆ ಮೌನದಲ್ಲಿಯೂ ಕೂಡ ಮಾತಿನ ದನಿಯಿರಬೇಕು, ಮೂಕ ಮೌನವು ಒಂದು ಶಾಪದೊಲು. ಹೀಗೆ ಮಾತೇ ಬದುಕಾಗಿರುವ ಕವಿಗೆ ಅವಳ ಮೌನವು ವಿಹ್ವಲವಾಗಿಸುತ್ತದೆ. ದೀರ್ಘವಾದ ಮೌನದ ಬಗೆಗಿನ ವ್ಯಾಖ್ಯಾನವಿಲ್ಲಿದೆ. ಆದರೆ, ನಾವು ಗಮನಿಸಬೇಕಾದ ವ್ಯಂಗ್ಯವೆಂದರೆ, ಪದ್ಯದ ಪ್ರಕಾರ ಅವರೇ ಸಖಿಯನ್ನು ಮೊದಲು ಮೌನದರಣ್ಯಕ್ಕೆ ನೂಕಿದ್ದು! ಇಷ್ಟು ಮಾತ್ರವಲ್ಲ 'ಸಖೀಗೀತ'ದ ಈ ಭಾಗದ ವಿಶೇಷವೆಂದರೆ, ಅವಳ ದನಿಯು ಇಲ್ಲಿ ನಿಚ್ಚಳವಾಗಿ ಕೇಳುತ್ತದೆ. ಹುಟ್ಟಿದ ಹೆಣ್ಣು ಮಗು ಲಲಿತೆ ಕೆಲವೇ ದಿನಗಳಲ್ಲಿ ತೀರಿಹೋದಾಗ ಅವರಿಬ್ಬರೂ 'ಅಗ್ನಿದಿವ್ಯದ' ಮಾತನ್ನು ಆಡುತ್ತಾರೆ. ಅಂದರೆ, ಆತ್ಮಹತ್ಯೆಯ ಯೋಚನೆಯೂ ಅವರಿಗೆ ಬಂದಿದೆ. ಇನ್ನೊಂದು ಪದ್ಯದಲ್ಲಿ ಹೇಳುವಂತೆ ಸಂವಾದದ ಬದಲು ವಾದವಿವಾದವು ಮುನ್ನೆಲೆಗೆ ಬಂದಿದೆ. ಇಲ್ಲಿ ಬೇಂದ್ರೆ ಅದ್ಭುತವಾದ ಪ್ರತಿಮೆಗಳ ಮೂಲಕ ಹುಟ್ಟಿದ ಬಿರುಕನ್ನು ವಿವರಿಸುತ್ತಾರೆ. ಅವಳ ಮಾತು ಕೇಳಿದರೆ ಹೆಣದ ತಂಗೈ ನನ್ನ ಮುಂಗೈಯ್ಯ ಹಿಡಿದಂತೆ ಭಾಸವಾಗುತ್ತದೆ. ಕೆಂಡದ ಬೂದಿಯು ಕೆಂಡವನ್ನು ಅದನ್ನು ಅಲ್ಲಿಯೇ ಹುಗಿಯುವಂತೆ ಅನುಭವವಾಗುತ್ತದೆ. ಪ್ರೀತಿಯು ಪ್ರೇತದ ತೆಕ್ಕೆಯಲ್ಲಿ ಸಿಕ್ಕಂತೆ ಅನ್ನಿಸುತ್ತದೆ. ಅತ್ಯಂತ ನೋವಿನ ಪ್ರತಿಮೆಯೆಂದರೆ ಅವರ ಕಣ್ಣುಗಳು 'ತಾಕಿದರೆ ಗೊಂಬಿ ಮೂಡದ ಕುರುಡುಗಾಜು' ಆದಂತೆ ಅನ್ನಿಸುತ್ತದೆ. ಅತ್ಯಂತ ಆತ್ಮೀಯವಾದ ಮನುಷ್ಯ ಸಂಬಂಧವೊಂದರಲ್ಲಿ ಹುಟ್ಟಿದ ಬಿರುಕನ್ನು ಇದಕ್ಕಿಂತ ಪ್ರಭಾವಿಯಾಗಿ ವರ್ಣಿಸಲಾಗದು. ಅವಳು ಹೇಳುತ್ತಾಳೆ, ಪುರುಷನು